ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ,
ಹೆಚ್.ಡಿ.ಕೋಟೆ

**ಸಿ.ಸಿ. ನಂ. 567/2019**

ಸಾಕ್ಷಿಗೆ ದಿನಾಂಕಃ **16.8.2022** ರಂದು ಪ್ರಮಾಣವಚನ ಬೋಧಿಸಲಾಯಿತು.

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮಹದೇವಸ್ವಾಮಿ | ಪಿ.ಡಬ್ಲ್ಯೂ-7 |
| ತಂದೆಯ/ಗಂಡನ ಹೆಸರು | : | ಭುಜಂಗಪ್ಪ | ಸಿ.ಡಬ್ಲ್ಯೂ-14 |
| ವಯಸ್ಸು | : | 42 | |
| ಉದ್ಯೋಗ | : | ವ್ಯವಸಾಯ | |
| ವಾಸಸ್ಥಳ | : | ಧನಗಳ್ಳಿ | |

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಮೃತ ನಾಗರಾಜು ನನ್ನ ದೊಡ್ಡಪ್ಪನ ಮಗ. ಆತನನ್ನು ಚಿಕಿತ್ಸೆಗೆ ದಾಖಲು ಮಾಡಿದ್ದು, ಆತ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾನೆ ಎಂದು ಚಾಸ1 ರವರು ತಿಳಿಸಿರುತ್ತಾರೆ. ಆಗ ನಾನು ಅಸ್ಪತ್ರೆ ಬಳಿ ಹೋಗಿ, ಚಾಸ1 ರವರನ್ನು ವಿಚಾರಿಸಲಾಗಿ ಆತ ಮಗನಾದ ನಾಗರಾಜುವರಿಗೆ ಜ್ವರ ಇದ್ದ ಕಾರಣ ಆತನನ್ನು ಆರೋಪಿ ಬಳಿ ಚಿಕಿತ್ತೆಗೆ ಕರೆದುಕೊಂಡು ಹೋಗಿದ್ದಾಗಾ, ಅತ ಇಂಜಕ್ಷನ್ ಮಾಡಿರುತ್ತಾನೆ. ಅದರಿಂದ ನಾಗರಾಜು ರವರಿಗೆ ಹೊಟ್ಟೆ ಮತ್ತು ದೇಹದ ಇತರ ಭಾಗದಲ್ಲಿ ನೋವು ಕಾಣಿಸಿರುತ್ತಾದೆ. ಪುನಃ ಆತನನ್ನು ಆರೋಪಿ ಬಳಿ ಕರೆದುಕೊಂಡು ಹೋದಾಗ ನಾಗರಾಜುರವರನ್ನು ಪರೀಕ್ಷಿಸಿ ಹೆಚ್ಚಿ ನ ಚಿಕಿತ್ಸೆಗೆ ಮೈಸೂರಿನ ಜೆ.ಎಸ್.ಎಸ್ ಆಸ್ಪತ್ರೆಗೆ ದಾಖಲು ಮಾಡಿರುತ್ತೇವೆ. ಆದರೆ ಚಿಕಿತ್ಸೆ ಫಲಕಾರಿಯಾಗದೇ ಆತ ಮೃತಪಟ್ಟಿರುತ್ತಾನೆ ಎಂದು ತಿಳಿಸಿರುತ್ತಾರೆ. ನಂತರ ದೇಹವನ್ನು ಹಂಪಾಪುರ ಗ್ರಾಮಕ್ಕೆ ತಂದಿರುತ್ತೇವೆ. ಆರೋಪಿ ನಾನು ವೈದ್ಯನಾಗಿರುವುದಿಲ್ಲ, ತಪ್ಪಿನ ಚಿಕಿತ್ಸೆ ನೀಡಿರುತ್ತೇನೆ, ಪರಿಹಾರ ಕೊಡುತ್ತೇನೆ, ದೂರು ನೀಡಬೇಡಿ ಎಂದು ಹೇಳಿರುತ್ತಾನೆ. ಆಗ ಆರೋಪಿ ನನ್ನ, ಚಾಸ15, 12, 13, 17 ಮತ್ತು 21 ರವರ ಸಮಕ್ಷಮ 10 ಲಕ್ಷ ಪರಿಹಾರ ಕೊಡುವುದಾಗಿ ಒಪ್ಪಿರುತ್ತಾನೆ, ಅದಕ್ಕೆ ಚಾಸ1 ರವರು ಒಪ್ಪಿರುತ್ತಾರೆ. ಆರೋಪಿ ನೋಡಿದರೆ ಗುರುತಿಸುತ್ತೇನೆ, ಈ ದಿನ ನ್ಯಾಯಾಲಯದ ಮುಂದಿರುತ್ತಾನೆ.

ಪಾಟೀ ಸವಾಲು ಃ ಆರೋಪಿ ಪರ ವಕೀಲರು ಸಮಯ ಕೋರಿದ್ದು, ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ